ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 29- 35
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಚಾಮರಾಜನಗರ ಜಿಲ್ಲೆಯ ಸ್ವಚ್ಚ ಭಾರತ ಅಭಿಯಾನದ ಪರಿಣಾಮ

**ವಿಜಯ ಕುಮಾರ್ ಎನ್.ಸಿ***

*ಸಂಶೋಧನಾ ವಿದ್ಯಾರ್ಥಿ, ಗಾಂಧೀ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

**Abstract:**

*"ಸ್ವಚ್ಛ ಭಾರತ– ಸ್ವಸ್ಥ ಭಾರತ ರಾಷ್ಟ್ರಪಿತ ಮಹಾತ್ಮ ಗಾಂಧೀಯವರ ಸ್ವಚ್ಛ ಭಾರತದ ಕನಸನ್ನು ನನಸಾಗಿಸೋಣ" ಎಂಬ ಧ್ಯೇಯ ವಾಕ್ಯದೊಂದಿಗೆ 2ನೇ ಅಕ್ಟೋಬರ್ 2014ರಂದು ರಾಷ್ಟ್ರ ರಾಜಧಾನಿ ದೆಹಲಿಯ ರಾಜ್‌ಘಾಟ್‌ನ ರಸ್ತೆಯನ್ನು ಗುಡಿಸುವ ಮೂಲಕ ಪ್ರಧಾನಿಯವರು ಸ್ವಚ್ಛ ಭಾರತ್ ಮಿಷನ್ ಯೋಜನೆಯನ್ನು ಇಡೀ ದೇಶಾದ್ಯಂತ ಜನಾಂದೋಲನವನ್ನಾಗಿಸಿದರು. ಇದರ ಫಲವಾಗಿಯೇ 2ನೇ ಅಕ್ಟೋಬರ್ 2019 ರಂದು ಇಡೀ ದೇಶವನ್ನು ಬಯಲು ಬಹಿರ್ದೆಸೆ ಮುಕ್ತ ದೇಶವೆಂದು ಘೋಷಣೆ ಮಾಡಲಾಯಿತು. ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನು ರೂಪಿಸಲು ದೇಶಾದ್ಯಂತ ಸ್ವಚ್ಚ ಭಾರತ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲಶಕ್ತಿ ಮಂತ್ರಾಲಯ ಆಗಿಂದಾಗ್ಗೆ ವಿಶೇಷ ಆಂದೋಲನಗಳನ್ನು ರೂಪಿಸುತ್ತಿದ್ದು, ರಾಜ್ಯಗಳೂ ಕೂಡ ಕಾರ್ಯಪ್ರವೃತ್ತವಾಗಿವೆ. ಈ ನಿಟ್ಟಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಸ್ವಚ್ಚ ಭಾರತ ಅಭಿಯಾನದ ಅನುಷ್ಠಾನ ಮತ್ತು ಪರಿಣಾಮದ ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.*

**Keywords:** *ಸ್ವಚ್ಚ ಭಾರತ, ಗಾಂಧೀಜಿ, ಗ್ರಾಮೀಣ ಭಾರತ, ಬಯಲು ಮುಕ್ತ ಶೌಚಾಲಯ.*

## ಪೀಠಿಕೆ

ಚಾಮರಾಜನಗರ ಜಿಲ್ಲೆಯಲ್ಲಿ ಸ್ವಚ್ಚ ಭಾರತ ಅಭಿಯಾನವು ಸ್ವಚ್ಚತೆಯ ಬಗೆಗೆ ಜನರ ಮನಸ್ಸನ್ನು ಸೆಳೆದಿದೆ. ಗ್ರಾಮೀಣ ಮತ್ತು ನಗರ ಸಮಾಜಗಳಲ್ಲಿನ ಕಂಡು ಬರುವ ಹಲವಾರು ಸಮಸ್ಯೆಗಳ ನಡುವೆ ನೈರ್ಮಲ್ಯ ಸಮಸ್ಯೆಯೂ ಪ್ರಮುಖವಾದುದಾಗಿದೆ. ಸಾಮಾಜಿಕ ಪರಿಸರ ಎಷ್ಟು ಶುದ್ಧವಾಗಿರುತ್ತದೆಯೋ ಅಷ್ಟೇ ಶುದ್ಧವಾಗಿ ಆ ಪರಿಸರದಲ್ಲಿ ಜೀವಿಸುವ ಜನರ ಮನಸ್ಸು ಇರುತ್ತದೆ. ಅಲ್ಲಿನ ಅಭಿವೃದ್ಧಿಯೂ ಉತ್ತಮವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭಾರತದ ಸಮಗ್ರ ಅಭಿವೃದ್ಧಿಗಾಗಿ ಕಾಲಕಾಲಕ್ಕೆ ಸರ್ಕಾರಗಳು ಹಲವು ಯೋಜನೆಗಳನ್ನು ಜಾರಿಗೆ ತಂದಿವೆ ಮತ್ತು ತರುತ್ತಲೂ ಇವೆ. ಭಾರತವನ್ನು ಬಲಿಷ್ಠ ದೇಶವನ್ನಾಗಿಸಲು ಕೈಗೊಂಡ ಅಭಿವೃದ್ಧಿಪರ ಯೋಜನೆಗಳಲ್ಲಿ ಸ್ವಚ್ಛ ಭಾರತ ಅಭಿಯಾನವೂ ಒಂದು. ಹಳ್ಳಿಗಳ ಉದ್ಧಾರದಿಂದಲೇ ಭಾರತದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಸ್ವರಾಜ್ಯದ ಕನಸು ಕಂಡಿದ್ದ ಮಹಾತ್ಮ ಗಾಂಧೀಜಿಯವರು ಪಂಚಾಯತ್‌ರಾಜ್ ವ್ಯವಸ್ಥೆಗೆ ಹೆಚ್ಚು ಒಲವನ್ನು ತೋರಿದ್ದರು. ಆದ್ದುದರಿಂದ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆಯಾದ ಅಕ್ಟೋಬರ್ 02, 2004 ರಂದು ಈ ಸ್ವಚ್ಚ ಭಾರತ ಅಭಿಯಾನವನ್ನು ಪ್ರಾರಂಭಿಸಲಾಯಿತು.

**Please cite this article as:** ವಿಜಯ ಕುಮಾರ್ ಎನ್.ಸಿ (2022). ಚಾಮರಾಜನಗರ ಜಿಲ್ಲೆಯ ಸ್ವಚ್ಚ ಭಾರತ ಅಭಿಯಾನದ ಪರಿಣಾಮ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(5), 29–35.

ಗ್ರಾಮೀಣ ಪ್ರದೇಶದಲ್ಲಿ ಬಯಲು ಶೌಚಾಲಯ ಸಾಮಾನ್ಯವಾಗಿತ್ತು. ಇದಕ್ಕೆ ಚಾಮರಾಜನಗರ ಜಿಲ್ಲೆ ಹೊರತೇನಲ್ಲ. ಭಾರತದಲ್ಲಿ ಅನೈರ್ಮಲ್ಯ ಬಯಲು ಬಹಿರ್ದೆಸೆಯಿಂದ ಹೆಚ್ಚು ಉಂಟಾಗುತ್ತದೆ. ಇದೊಂದು ಪ್ರಧಾನ ಪಿಡುಗಾಗಿ ಪರಿಸರವನ್ನು ಕಾಡುತ್ತಿದೆ. ಆದ್ದರಿಂದಲೇ ಪರಿಸರ ಸ್ವಚ್ಛತೆಯನ್ನು ಕಾಪಾಡಲು ಕೇಂದ್ರ ಸರ್ಕಾರವು ಜಾರಿಗೆ ತಂದ ಸ್ವಚ್ಛ ಭಾರತ ಅಭಿಯಾನವು ಭಾರತದ ಇತರೆ ಪ್ರದೇಶಗಳಂತೆಯೇ ಚಾಮರಾಜನಗರ ಜಿಲ್ಲೆಯಲ್ಲಿಯೂ ಅನುಷ್ಠಾನಗೊಳ್ಳುತ್ತ ಬಂದಿದೆ.

ಸ್ವಚ್ಛ ಭಾರತ ಅಭಿಯಾನ ಕೇವಲ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಕೊಡುಗೆ ಮಾತ್ರವಲ್ಲ. ಅದು ಭಾರತದ ರಾಜಕೀಯ ಇತಿಹಾಸದಲ್ಲಿ ಮೊದಲಿನಿಂದಲೂ ಚಾಲ್ತಿಯಲ್ಲಿದ್ದು, ವಿಸ್ತೃತಗೊಳ್ಳುತ್ತ ಬಂದಿದೆ. ಕರ್ನಾಟಕದಲ್ಲಿ 1985 ರಿಂದಲೂ ಸ್ವಚ್ಛತೆಯನ್ನು ಕಾಪಾಡುವುದಕ್ಕಾಗಿ ಆದ್ಯತೆಯನ್ನು ನೀಡಲಾಗಿದೆ. 1985 ರಿಂದ 1995ರ ಅವಧಿಯಲ್ಲಿ ಕೇಂದ್ರ ಗ್ರಾಮೀಣ ನೈರ್ಮಲ್ಯ ಯೋಜನೆ, 1999 ರಿಂದ 2002ರ ಅವಧಿಯಲ್ಲಿ ಮಕ್ಕಳ ಪರಿಸರ ಅಭಿವೃದ್ಧಿಗೆ ಯೋಜನೆ, 1999 ರಿಂದ 2004ರ ಅವಧಿಯಲ್ಲಿ ಕೇಂದ್ರ ವಲಯ ಸುಧಾರಣಾ ಯೋಜನೆ, ಸ್ವಚ್ಛ ಗ್ರಾಮ ಯೋಜನೆ (2001–02), ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ, 1993ರಿಂದ ವಿಶ್ವ ಬ್ಯಾಂಕ್‌ನ ಜಲ ನಿರ್ಮಲ ಯೋಜನೆ, 2005–2012 ಸಂಪೂರ್ಣ ಸ್ವಚ್ಚತಾ ಆಂದೋಲನ, 2012–2014 ನಿರ್ಮಲ ಭಾರತ ಅಭಿಯಾನ, ಪ್ರಸ್ತುತ 2014ರಿಂದ ಈಚೆಗೆ (ಅಕ್ಟೋಬರ್ 2) ಸ್ವಚ್ಚ ಭಾರತ ಅಭಿಯಾನ ಎಂಬುದಾಗಿ ವಿವಿಧ ಹಂತಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳು ನಡೆದು ಬಂದಿವೆ. ವಿವಿಧ ದೇಶೀಯ ಮತ್ತು ವಿದೇಶಿಯ ಸಂಸ್ಥೆಗಳ ಸಹಕಾರದೊಂದಿಗೆ ವಿನೂತನವಾದ ಮತ್ತು ವಿಸ್ತೃತವಾದ ರೂಪವನ್ನು ಪಡೆದು ವಿಕಾಸ ಹೊಂದುತ್ತಿರುವ ಸ್ವಚ್ಛ ಭಾರತ ಅಭಿಯಾನವನ್ನು ಚಾಮರಾಜನಗರ ಜಿಲ್ಲೆಯು ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದ್ದರೂ ಹೆಚ್ಚಿನ ಯಶಸ್ಸನ್ನು ಕಂಡಿಲ್ಲ. ಪ್ರಸ್ತುತ ಕೇಂದ್ರ ಸರ್ಕಾರದ ನೈರ್ಮಲ್ಯ ಕಾರ್ಯಕ್ರಮಗಳನ್ನು ಸಂಪೂರ್ಣ ಸ್ವಚ್ಛತಾ ಆಂದೋಲವನ್ನು ಸಾಧಿಸಲು ಕರ್ನಾಟಕ ರಾಜ್ಯದ ಮೂವತ್ತು ಜಿಲ್ಲೆಗಳಲ್ಲಿಯೂ ತೀವ್ರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ ಎಲ್ಲಾ ಗ್ರಾಮಗಳನ್ನು ಬಯಲು ಶೌಚಾಲಯದಿಂದ ಮುಕ್ತಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಆದರೆ ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣ ಪರಿಸರವೇ ಪ್ರಧಾನವಾಗಿದ್ದು ಅರಿವಿನ ಕೊರತೆ ಮತ್ತು ಅಧಿಕಾರಿಗಳ ಭ್ರಷ್ಟಾಚಾರದಸದಿಂದ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗಿಲ್ಲ.

ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರ ಪ್ರತ್ಯೇಕ ಜಿಲ್ಲೆಯಾಗಿ ಬೇರ್ಪಟ್ಟಿದ್ದರೂ ಒಂದು ಜಿಲ್ಲೆಗೆ ಇರಬೇಕಾದ ಕನಿಷ್ಠ ಅಭಿವೃದ್ಧಿಯನ್ನು ಸಾಧಿಸಿಲ್ಲವೆಂಬುದು ಅರಿವಿಗೆ ಬರುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಗ್ರಾಮೀಣ ಪರಿಸರದ ಅಭಿವೃದ್ಧಿ ಸಮಗ್ರವಾಗಿ ಬೆಳೆವಣಿಗೆ ಕಾಣುತ್ತದೆ. ಎಂಬ ಗಾಂಧೀಜಿಯವರ ಚಿಂತನೆಗಳು ಇಂದಿಗೂ ಸಾಕಾರಗೊಳ್ಳುವ ಕುರುಹುಗಳು ಲವಲೇಶವೂ ಗೋಚರಿಸದೆ ಇರುವುದು ಚಾಮರಾಜನಗರ ಜಿಲ್ಲೆಯ ಪಂಚಾಯತ್‌ರಾಜ್ ಆಡಳಿತವನ್ನು ಗಮನಿಸಿದಾಗ ಗೋಚರವಾಗುತ್ತದೆ. 2019ರ ಗಾಂಧೀ ಜಯಂತಿಯ 150ನೇ ವರ್ಷಾಚರಣೆಯ ವೇಳೆಗೆ ದೇಶವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವ ಉದ್ದೇಶದೊಂದಿಗೆ ಈ ಯೋಜನೆಯು ದೇಶದಾದ್ಯಂತ ಚಾಲನೆಯನ್ನು ಪಡೆಯಿತು. ನವದೆಹಲಿಯ ರಾಜ್‌ಪಥ್‌ನಲ್ಲಿ 'ಸ್ವಚ್ಛ ಭಾರತ ಅಭಿಯಾನ'ಕ್ಕೆ ನರೇಂದ್ರ ಮೋದಿಯವರು ಕಸಗುಡಿಸುವ ಮೂಲಕ ಅಭಿಯಾನಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದರು. ಮಹಾತ್ಮಾ ಗಾಂಧೀಜಿಯವರ ನಿರ್ಮಲ ಭಾರತ

ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ 2 ಲಕ್ಷ ಕೋಟಿ ವೆಚ್ಚದಲ್ಲಿ ಈ ಮಹಾತ್ವಾಕಾಂಕ್ಷೆಯ ಯೋಜನೆಯನ್ನು ರೂಪಿಸಲಾಗಿದ್ದು 5 ವರ್ಷಗಳ ಅವಧಿಯಲ್ಲಿ 4041 ಪಟ್ಟಣ ಹಾಗೂ ಗ್ರಾಮಗಳನ್ನು ಸ್ವಚ್ಛಗೊಳಿಸುವ ಗುರಿಯನ್ನು ಹೊಂದಲಾಗಿದೆ. ಈ ಅಭಿಯಾನಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ವರ್ಷಕ್ಕೆ 20 ಲಕ್ಷ ರೂ. ಅನುದಾನವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿದೆ. ಪಟ್ಟಣಗಳ ಸ್ವಚ್ಛತೆಗಾಗಿ ನಗರಾಭಿವೃದ್ಧಿ ಸೇವಾವಲಯವು 62 ಸಾವಿರ ಕೋಟಿ ರೂಪಾಯಿ ಹಾಗೂ ಕುಡಿಯುವ ನೀರು ಪೂರೈಕೆ ಮತ್ತು ಶೌಚಾಲಯ ನಿರ್ಮಾಣ ಸಚಿವಾಲಯ ಈ ಯೋಜನೆಗೆ 1.34 ಲಕ್ಷ ಕೋಟಿ ರೂ.ಹಣವನ್ನು ತೆಗೆದಿರಿಸಿದೆ.

ವಿಶ್ವದಾದ್ಯಂತ ಬಾರಿ ಸುದ್ದಿ ಮಾಡಿದ ತಲೆಯ ಮೇಲೆ ಮೈ ಕೊರೆಯುವ ತಣ್ಣನೆಯ ನೀರು ಸುರಿದುಕೊಳ್ಳುವ 'ಐಸ್ ಬಕೆಟ್ ಚಾಲೆಂಜ್' ಮಾದರಿಯಲ್ಲಿಯೇ 'ಸ್ವಚ್ಛ ಭಾರತ ಅಭಿಯಾನದ ಜಾಗೃತಿಗಾಗಿ ಮಾಜಿ ಕ್ರಿಕೆಟ್ ಸಚಿನ್ ತೆಂಡೂಲ್ಕರ್, ಸಂಸದ ಶಶಿತರೂರ್, ಅನಿಲ್ ಅಂಬಾನಿ, ಸಲ್ಮಾನ್ ಖಾನ್, ಕಮಲ್ ಹಾಸನ್, ಪ್ರಿಯಾಂಕ ಸಿನ್ಹಾ ಮತ್ತು ಜನಪ್ರಿಯ ಹಿಂದಿ ಟಿ.ವಿ ಧಾರವಾಹಿ ತಾರಕ್ ಮೆಹ್ತಾ ಕಾ ಉಲ್ಟಾ ಚಷ್ಮಾ ತಂಡದ ಕಲಾವಿದರಿಗೆ ಪ್ರಧಾನಿ ನರೇಂದ್ರ ಮೋದಿಯವರು ಪಂಥಾಹ್ವಾನ ನೀಡಿದ್ದರು. ಸ್ವಚ್ಛ ಭಾರತ ಅಭಿಯಾನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಹಲವು ಜನಪ್ರಿಯ ತಾರೆಗಳನ್ನು ಜಾಗೃತಿ ಮೂಡಿಸುವುದಕ್ಕಾಗಿ ಕೇಂದ್ರ ಸರ್ಕಾರ ಮತ್ತು ಅದರ ಭಾಗವಾಗಿರುವ ಹಲವು ಸಂಸ್ಥೆಗಳು ಕೋಟಿ ಕೋಟಿ ಹಣವನ್ನು ಬಿಡುಗಡೆ ಮಾಡಿದೆ ಮತ್ತು ಮಾಡುತ್ತಲೂ ಇದೆ. ಹೀಗಿದ್ದರೂ ದೇಶದಲ್ಲಿ ಸ್ವಚ್ಛತೆಯ ಅಭಿಯಾನದ ಯಶಸ್ಸು ಆದರ ಗುರಿಯನ್ನು ಮುಟ್ಟಿಲ್ಲ ಎಂದು ಹೇಳಲು ಸಂಕಟವಾದರೂ ಸತ್ಯ ಚಾಮರಾಜನಗರ ಜಿಲ್ಲೆ ಇದಕ್ಕೆ ಹೊರತಾಗಿಲ್ಲ.

ಸ್ವಚ್ಛ ಭಾರತ ಅಭಿಯಾನಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ ಚಾಮರಾಜನಗರ ಕೆಲವು ಸಲಹೆಗಳನ್ನು ನೀಡುತ್ತದೆ. ವೈಯಕ್ತಿಕ ಶುಚಿತ್ವಕ್ಕೆ ಅಧಿಕ ಗಮನವನ್ನು ಕೊಡುವಂತೆ ತನ್ನ ಜನತೆಗೆ ನಿರ್ದೇಶನ ಮಾಡುತ್ತದೆ. ಜಿಲ್ಲೆಯ ಪಂಚಾಯತ್ ರಾಜ್ ಆಡಳಿತವು ಸ್ವಚ್ಛತೆಗೆ ಈ ಬಗೆಯ ಮಾರ್ಗದರ್ಶನವನ್ನು ನೀಡುತ್ತಿವೆ. ಮಲವಿಸರ್ಜನೆಯ ನಂತರ ಹಾಗೂ ಆಹಾರ ಸೇವೆಗೆ ಮೊದಲು ಸಾಬೂನಿನಿಂದ ಕೈ ತೊಳೆಯಬೇಕು. ಗ್ರಾಮದ ಸುತ್ತ ಮುತ್ತಲಿನ ನೈರ್ಮಲ್ಯವನ್ನು ಕಾಪಾಡುವ ಜವಾಬ್ಧಾರಿ ಪ್ರತಿಯೊಬ್ಬರ ಮೇಲಿರುತ್ತದೆ. ಹಾಗೆಯೇ ಗ್ರಾಮದ ಸುತ್ತಮುತ್ತಲಿನ ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳಲು, ನೀರಿನ ಸದ್ಬಳಕೆ ಅತ್ಯಗತ್ಯ. ನೀರಿನ ಉತ್ತಮ ಬಳಕೆ, ಉಸ್ತುವಾರಿ ಹಾಗೂ ನೀರಿನ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ನೀರಿನ ಸಂರಕ್ಷಣೆಗೆ ಎಲ್ಲರೂ ಸಂಪೂರ್ಣ ಸಹಕಾರವನ್ನು ನೀಡಬೇಕೆಂಬುದಾಗಿ ತಿಳಿಸುತ್ತದೆ. ವೈಯಕ್ತಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಮೂಲಕ ಸಾಂಕ್ರಾಮಿಕ ರೋಗಗಳು ಹರಡದಂತೆ ನೊಡಿಕೊಳ್ಳಬೇಕಾದುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂಬುದನ್ನು ಚಾಮರಾಜನಗರ ಜಿಲ್ಲೆಯ ಪಂಚಾಯತ್ ರಾಜ್ ವ್ಯವಸ್ಥೆಯು ತನ್ನ ವಾರ್ಷಿಕ ವರದಿಯಲ್ಲಿ ತಿಳಿಯಪಡಿಸುತ್ತದೆ. ಸ್ವಚ್ಛತೆಯ ಪ್ರಮುಖ ಗುರಿಯನ್ನು ಸಾಕಾರಗೊಳಿಸುವುಕ್ಕಾಗಿಯೇ ಪ್ರತಿ ಗ್ರಾಮ ಪಂಚಾಯಿತಿಗೂ 20 ಲಕ್ಷ ರೂಪಾಯಿಗಳನ್ನು ಖಂಡಿತವಾಗಿಯೂ ಸಂಪೂರ್ಣ ಸ್ವಚ್ಛತೆಯನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಅವಲೋಕಿಸಿದಾಗ 2016ರಲ್ಲಿ ಸ್ವಚ್ಛತೆಯಲ್ಲಿ ಉಡುಪಿ ಜಿಲ್ಲೆ ದೇಶದಲ್ಲಿ 7ನೇ ಸ್ಥಾನವನ್ನು ಗಳಿಸಿಕೊಂಡದ್ದು ಬಿಟ್ಟರೆ ಉಳಿದ ಜಿಲ್ಲೆಗಳು ಈ ಸಾಧನೆಯಲ್ಲಿ ಹಿಂದೆ ಬಿದ್ದಿವೆ. ಸ್ವಚ್ಛ ನಗರಗಳಂತೆ ಸ್ವಚ್ಛ ಗ್ರಾಮೀಣ ಪ್ರದೇಶಗಳಿಗೂ ಕೇಂದ್ರ ಸರ್ಕಾರ ರ್‍ಯಾಂಕಿಂಗ್ ನೀಡಿ ಗೌರವ

ಸಲ್ಲಿಸುವುದರ ಜೊತೆಗೆ ಬಹುಮಾನವನ್ನು ನೀಡಲಾಗುತ್ತಿದೆ. ಮೈಸೂರು ನಗರ ಸತತ ಎರಡನೇ ಬಾರಿ ಸ್ವಚ್ಛನಗರ ಎಂಬ ಮಾನ್ಯತೆಯನ್ನು ಪಡಿಯಿತು. ಉಡುಪಿ ಜಿಲ್ಲೆ ಗ್ರಾಮೀಣ ಪ್ರದೇಶದ ರ‍್ಯಾಂಕಿಂಕ್‌ನಲ್ಲಿ 7ನೇ ಸ್ಥಾನವನ್ನು ಪಡೆದದ್ದು ಈವರೆಗಿನ ಹೆಗ್ಗಳಿಕೆಯಷ್ಟೆ. ಈ ರ‍್ಯಾಂಕಿಂಗ್ ಅನ್ನು ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣ ಸಚಿವಾಲಯ ವರದಿಯನ್ನು ಸಿದ್ಧಪಡಿಸುವ ಮೂಲಕ ನೀಡುತ್ತದೆ. ಈ ವರದಿಯಲ್ಲಿ ಚಾಮರಾಜನಗರ ಜಿಲ್ಲೆಯ ನಗರಸಭೆ, ಪುರಸಭೆಗಳಾಗಲೀ, ಗ್ರಾಮ ಪಂಚಾಯ್ತಿಗಳಾಗಲೀ ಹೇಳಿಕೊಳ್ಳುವ ಸ್ಥಾನಮಾನವನ್ನು ಗಿಟ್ಟಿಸಿಲ್ಲ. ಹಾಗೆಂದ ಮಾತ್ರಕ್ಕೆ ಇಲ್ಲಿ ಸ್ವಚ್ಛತಾ ಕಾರ್ಯಕ್ರಮಗಳು ನಡೆದಿಲ್ಲವೆಂದು ಅರ್ಥವಲ್ಲ. ಅಧಿಕಾರಿ ವರ್ಗ ಮತ್ತು ಜನಸಾಮಾನ್ಯರ ಬೇಜವಾಬ್ದಾರಿತನ ಇವುಗಳನ್ನು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಾಣಲು ಬಿಟ್ಟಿಲ್ಲ ಎಂಬುದು ಗೋಚರವಾಗುತ್ತದೆ. ಎಲ್ಲಾ ವಲಯಗಳನ್ನು ಕಲುಷಿತಗೊಳಿಸಿರುವ ಜಾತಿಯ ಸೋಂಕು ಸ್ವಚ್ಛ ಭಾರತ ಅಭಿಯಾನವನ್ನು ರೋಗಗ್ರಸ್ಥವಾಗುವಂತೆ ಮಾಡಿದೆ. ಕೇಂದ್ರ ಸರ್ಕಾರದಿಂದ ಬರುವ ಅನುದಾನ ಎಷ್ಟೇ ದೊಡ್ಡ ಮೊತ್ತದ್ದಾಗಿರಲಿ ಅದನ್ನು ಫಲಾನುಭವಿಗಳಿಗೆ ತಲುಪಿಸುವ ಅಧಿಕಾರಿ ವರ್ಗ ಜಾತೀಯತೆಯ ಸೋಕಿನಿಂದ ದೂರಾದಾಗ ಮಾತ್ರ ಸ್ವಚ್ಛ ಭಾರತ ಅಭಿಯಾನ ಸಮಗ್ರ ಯಶಸ್ಸನ್ನು ಕಾಣುತ್ತದೆ. ಇಲ್ಲವಾದಲ್ಲಿ ಬಲಿಷ್ಠ ಜಾತಿಗಳ ತಿಜೋರಿಯನ್ನು ಸೇರುವ ಅನುದಾನದ ಹಣ ದುರುಪಯೋಗವಾಗುವ ಅಪಾಯದಿಂದ ಚಾಮರಾಜನಗರ ಜಿಲ್ಲೆ ಮುಕ್ತವಾಗಿಲ್ಲ.

ಸ್ವಚ್ಛ ಭಾರತ ಪ್ರಮುಖವಾಗಿ ಮೂರು ಮಜಲುಗಳ ಮೇಲೆ ಕೇಂದ್ರೀಕೃತವಾಗಿದೆ ಎಂದು ಗುರುತಿಸಲು ಸಾಧ್ಯವಿದೆ. ಶೌಚಾಲಯ ನಿರ್ಮಾಣ, ಘನತ್ಯಾಜ್ಯ ನಿರ್ವಹಣೆ ಮತ್ತು ಉತ್ತೇಜಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡುವ ಮೂಲಕ ನೈರ್ಮಲ್ಯವನ್ನು ಕಾಪಾಡಲು ಪಂಚಾಯಿತಿ ಮಟ್ಟದಲ್ಲಿ ಶ್ರಮಿಸಲಾಗುತ್ತಿದೆ. ಶೌಚಾಲಯಗಳ ನಿರ್ಮಾಣದಲ್ಲಿ ಗೃಹ ಶೌಚಾಲಯಗಳು, ಶಾಲೆ ಮತ್ತು ಅಂಗನವಾಡಿ ಶೌಚಾಲಯಗಳು ಮತ್ತು ಸಮುದಾಯ ಶೌಚಾಲಯಗಳು ಬರುತ್ತವೆ. ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬವೂ ಶೌಚಾಲಯವನ್ನು ಹೊಂದುವಂತೆ ಮಾಡಲು ಈ ಯೋಜನೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದ ಜನ ಬಡತನ ಮತ್ತು ಬಡತನ ರೇಖೆಗಿಂತ ಕಡಿಮೆ ಜೀವನ ಮಟ್ಟವನ್ನು ಹೊಂದಿದವರಾಗಿರುತ್ತಾರೆ. ಭೂ ರಹಿತ ಕಾರ್ಮಿಕರಾಗಿರುತ್ತಾರೆ ಹಾಗೂ ಕೇವಲ ಮಹಿಳೆಯರೇ ಇರುವ ಮಹಿಳಾ ಮುಖ್ಯಸ್ಥರಿರುವ ಕುಟುಂಬಗಳಿಗೆ ಶೌಚಾಲಯವನ್ನು ಹೊಂದುವುದು ಕಷ್ಟವಾಗುತ್ತದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅದಕ್ಕೆ ತಗಲುವ ವೆಚ್ಚವನ್ನು 75:25ರ ಅನುಪಾತದಲ್ಲಿ ಭರಿಸುತ್ತವೆ. ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಈ ಅನುದಾನ ಬಿಡುಗಡೆಯಾಗುತ್ತದೆ. ಪ್ರತಿಯೊಂದು ಗ್ರಾಮದ ಪ್ರತಿ ಕುಟುಂಬಕ್ಕೂ ಆಯಾ ಗ್ರಾಮ ಪಂಚಾಯಿತಿಯು ಶೌಚಾಲಯ ನಿರ್ಮಾಣಕ್ಕೆ ಉತ್ತೇಜನವನ್ನು ನೀಡುತ್ತದೆ ಮತ್ತು ಪ್ರೋತ್ಸಾಹಧನವನ್ನು ನೀಡುತ್ತದೆ. ಗೃಹ ಶೌಚಾಲಯಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 12,000 ರೂಪಾಯಿಗಳನ್ನು ನೀಡಿದರೆ ರಾಜ್ಯ ಸರ್ಕಾರ ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ಹೆಚ್ಚುವರಿಯಾಗಿ 3000 ರೂ. ಗಳನ್ನು ನೀಡುತ್ತದೆ.

ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಸಮುದಾಯ ಶೌಚಾಲಯಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 70:30ರ ಅನುಪಾತದಲ್ಲಿ ಖರ್ಚನ್ನು ಭರಿಸುತ್ತವೆ. ಗ್ರಾಮೀಣ ಪರಿಸರವೇ ಆಗಲಿ ಅಥವಾ ಯಾವುದೇ ಪ್ರದೇಶವಾಗಲಿ ಶಾಲೆ. ಕಾಲೇಜು ಅಂಗನವಾಡಿ ಕೇಂದ್ರಗಳು ಮೊದಲಾದ ವಿದ್ಯಾ

ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣ ಮಾಡುವಮೂಲಕ ಮಕ್ಕಳಲ್ಲಿ ಸ್ವಚ್ಛತೆಯ ಪರಿಕಲ್ಪನೆಯನ್ನು ಮೂಡಿಸಲು ಸಾಧ್ಯವಾಗುತ್ತದೆ. ಪರಿಷ್ಕೃತ ಮಾರ್ಗಸೂಚಿಗಳ ಅನ್ವಯ ಶಾಲಾ ಶೌಚಾಲಯದ ನಿರ್ಮಾಣಕ್ಕೆ 35,000 ರೂ ಹಾಗೂ ಅಂಗನವಾಡಿ ಶೌಚಾಲಯದ ವೆಚ್ಚ 8 ಸಾವಿರ ರೂ.ಗಳಾಗಿರುತ್ತವೆ. ಸಮುದಾಯದ ಶೌಚಾಲಯಗಳು ಸಾರ್ವಜನಿಕ ಶೌಚಾಲಯಗಳಾಗಿರುತ್ತವೆ. ಹೆಚ್ಚಿನ ಜನ ಸಂದಣಿ ಇರುವ ಸ್ಥಳಗಳಲ್ಲಿ ಬಸ್ ನಿಲ್ದಾಣ, ಆಸ್ಪತ್ರೆ ಮೊದಲಾದ ಸ್ಥಳಗಳಲ್ಲಿ ಇಂತಹ ಶೌಚಾಲಯಗಳ ನಿರ್ಮಾಣವಾಗುತ್ತದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಫಲಾನುಭವಿಗಳ ವಂತಿಗೆ ಇವಿಷ್ಟೂ ಸೇರಿ 60:30:10 ಅನುಪಾತದಲ್ಲಿ ರೂ.2.00 ಲಕ್ಷಗಳ ಅನುದಾನದಲ್ಲಿ ಸ್ವಚ್ಛ ಭಾತರ ಅಭಿಯಾನಕ್ಕೆ ಒದಗಿಸಲಾಗುತ್ತದೆ.

ಗ್ರಾಮೀಣ ಪರಿಸರದಲ್ಲಿ ತ್ಯಾಜ್ಯ ವಸ್ತುವಿನ ವಿಲೇವಾರಿ ಅತ್ಯಂತ ತ್ರಾಸದಾಯಕ. ಕೃಷಿ ಸಂಸ್ಕೃತಿಯನ್ನು ಪ್ರಧಾನವಾಗಿ ಹೊಮದಿರುವ ಗ್ರಾಮೀಣ ಜನತೆಯ ಬದುಕಿನಲ್ಲಿ ಘನ ತ್ಯಾಜ್ಯ ನಿರ್ವಹಣೆ ಸವಾಲಿನದಾಗಿರುತ್ತದೆ. ತ್ಯಾಜ್ಯ ಮತ್ತು ಕೊಳಚೆ ಸಾಮಾನ್ಯವಾಗಿರುತ್ತದೆ. ಇವುಗಳ ನಿರ್ವಹಣೆಗಾಗಿ ಪ್ರತ್ಯೇಕ ಅನುದಾನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುತ್ತವೆ. 150ಕ್ಕಿಂತ ಕಡಿಮೆ ಕುಟುಂಬಗಳಿರುವ ಗ್ರಾಮ ಪಂಚಾಯಿಗಳಿಗೆ 9 ಲಕ್ಷ ರೂಪಾಯಿಗಳನ್ನು, 500 ಕುಟುಂಬಗಳಿರುವ ಗ್ರಾಮ ಪಂಚಾಯಿತಿಗೆ 12 ಲಕ್ಷ ರೂಪಾಯಿಗಳನ್ನು, 500ಕ್ಕಿಂತ ಅಧಿಕ ಕುಟುಂಬಗಳಿರುವ ಗ್ರಾಮ ಪಂಚಾಯಿಗಳಿಗೆ ರೂ 20 ಲಕ್ಷಗಳನ್ನು ಇದಗಿಸಲಾಗುತ್ತದೆ. ಇಷ್ಟು ಅನುದಾನವನ್ನು ಪ್ರತಿವರ್ಷ ಮೀಸಲಿಡಲಾಗುತ್ತದೆ. ಆದರೂ ಚಾಮರಾಜನಗರ ಜಿಲ್ಲೆಯ ಬಹುತೇಕ ಗ್ರಾಮಗಳು ನೈರ್ಮಲ್ಯವನ್ನು ಸಾಧಿಸಲಾಗಿಲ್ಲ. ಬಿಡುಗಡೆಯಾಗುವ ಅನುದಾನ ಕೇವಲ ಕಾಗದದಲ್ಲಿ ಮಾತ್ರ ನಮೂದಾಗಿರುತ್ತದೆ. ನಿಜವಾದ ಫಲಾನುಭವಿಗಳನ್ನು ಆಳ್ವಿಕೆಯ ಬಲಹೀನತೆಯನ್ನು ತೋರಿಸುತ್ತದೆ.

ಒಂದು ದೇಶದ ಸ್ವಚ್ಛತೆ ಅಲ್ಲಿನ ಗ್ರಾಮಾಡಳಿತದ ಮೂಲಕವೇ ಪ್ರಾರಂಭವಾಗಬೇಕು. ಆಗ ಮಾತ್ರ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸಲು ಸಾಧ್ಯ. ಆದ್ದರಿಂದಲೇ ಭಾರತದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಈ ಆಂದೋಲನದಲ್ಲಿ ಭಾಗವಹಿಸುವಂತೆ ಯೋಜನೆಗಳನ್ನು ರೂಪಿಸಿಕೊಂಡು ಪ್ರಗತಿಯನ್ನು ಸಾಧಿಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಜನ ಕೇಂದ್ರಿತವಾದ ಕ್ರಮಗಳು. ಬೇಡಿಕೆ ಆಧಾರಿತ, ಸಮುದಾಯದ ಸಹಭಾಗಿತ್ವದ ಯೋಜನೆಗಳಿಂದಲೇ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಸಾಧ್ಯವಾಗುವುದರಿಂದ ಸೂಕ್ತವಾದ ಉತ್ತೇಜನ ನೀಡಬೇಕಾಗುತ್ತದೆ. ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಸಾಧಿಸಲೋಸುಗ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಪ್ರಶಸ್ತಿ ಪುರುಸ್ಕಾರಗಳನ್ನು ನೀಡಲಾಗುತ್ತಿದೆ. ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಗ್ರಾಮ ಪಂಚಾಯಿತಿಗಳಿಗೆ 'ನಿರ್ಮಲ ಗ್ರಾಮ ಪುರಸ್ಕಾರ' ಎಂಬ ಕೇಂದ್ರ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇದು ರಾಷ್ಟ್ರಪತಿಗಳಿಂದ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ನೇರವಾಗಿ ನೀಡುವ ಏಕೈಕ ಪ್ರಶಸ್ತಿಯಾಗಿದ್ದು, 50 ಸಾವಿರದಿಂದ 5 ಲಕ್ಷದವರೆಗೂ ಬಹುಮಾನ ಮೊತ್ತವನ್ನು ನಿಗದಿಪಡಿಸಲಾಗುವುದು. 'ಸ್ವಚ್ಛ ಭಾತರ ಅಭಿಯಾನದ ಆಂದೋಲನಕ್ಕೆ ತೀವ್ರತೆಯನ್ನು ತರುವ ಉದ್ದೇಶದಿಂದ ಸ್ವಚ್ಛತೆಯ ಸಾಧನೆಯನ್ನು ಸ್ಥಿರವಾಗಿ ಕಾಪಾಡಿಕೊಳ್ಳುವ ಹಳ್ಳಿಗಳು, ಪಂಚಾಯಿತಿಗಳು ಹಾಗೂ ವ್ಯಕ್ತಿಗಳಿಗೆ ರಾಜ್ಯ ಸರ್ಕಾರವೂ ರಾಜ್ಯ ಪ್ರಶಸ್ತಿಯನ್ನು ನೀಡುತ್ತದೆ. ಮಾತ್ರವಲ್ಲದೆ ತಾಲ್ಲೂಕು ಮಟ್ಟ, ಜಿಲ್ಲಾಮಟ್ಟ ಹಾಗೂ ವಲಯ ಮಟ್ಟಗಳಲ್ಲಿಯೂ ಪ್ರಶಸ್ತಿ ಪ್ರಧಾನವನ್ನು ಮಾಡುತ್ತದೆ. ಅವುಗಳಲ್ಲಿ 'ರಾಜ್ಯ ನೈರ್ಮಲ್ಯ' ಪ್ರಶಸ್ತಿ

ಪ್ರಮುಖವಾದದು. ಶೌಚಾಲಯಗಳನ್ನು ನಿರ್ಮಿಸಿಕೊಂಡರೂ ಬಳಸುವ ಆಸಕ್ತಿ ಜನರಲ್ಲಿ ಇಲ್ಲದೆ ಹೋದರೆ ಸರ್ಕಾರದ ಎಲ್ಲಾ ಪ್ರಯತ್ನಗಳು ವ್ಯರ್ಥವಾಗುತ್ತವೆ.

ಶಿಕ್ಷಣ ಸಮುದಾಯ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರೋತ್ಸಾಹ ಧನ ನೀಡುವ ಮೂಲಕ ಗ್ರಾಮೀಣ ಪ್ರದೇಶದ ಜನರಲ್ಲಿ ಸ್ವಚ್ಛತಾ ಪ್ರಜ್ಞೆಯನ್ನು ಪ್ರೇರೇಪಿಸಲು ಸಾಧ್ಯವಿರುವುದರಿಂದ ರಾಜ್ಯ ಸರ್ಕಾರವು 2009ರ ಅಕ್ಟೋಬರ್ 2ರ ಗಾಂಧಿ ಜಯಂತಿಯಂದು ರಾಜ್ಯ ನೈರ್ಮಲ್ಯ ಪ್ರಶಸ್ತಿಯನ್ನು ನೀಡುವ ಯೋಜನೆಗೆ ಚಾಲನೆಯನ್ನು ಒಳಗೊಂಡಿರುತ್ತದೆ. ತಾಲ್ಲೂಕು, ಜಿಲ್ಲೆ ಮತ್ತು ವಿಭಾಗ ಮಟ್ಟದಲ್ಲಿ ನೀಡಲಾಗುವ ರಾಜ್ಯ ಪ್ರಶಸ್ತಿಯ ಮೊತ್ತ ಗ್ರಾಮ ಪಂಚಾಯಿತಿಗೆ 1 ಲಕ್ಷದಿಂದ 19 ಲಕ್ಷದವರೆಗೆ, ತಾಲ್ಲೂಕು ಪಂಚಾಯಿತಿಗೆ ರೂ.20 ಲಕ್ಷ ಹಾಗೂ ಜಿಲ್ಲಾ ಪಂಚಾಯಿತಿಗೆ 30. ಲಕ್ಷದವರೆಗೆ ಬಹುಮಾನವನ್ನು ನೀಡಲಾಗುತ್ತದೆ. ನಿರ್ಮಲ ಭಾರತ ಅಭಿಯಾನದ ಅಡಿಯಲ್ಲಿ ಅಥವಾ ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಕೆ ಮಾಡುತ್ತಿದ್ದಲ್ಲಿ ಅಂತಹ ಕುಟುಂಬ, ಶಾಲೆ, ಅಂಗನವಾಡಿಗಳಿಗೆ ನೈರ್ಮಲ್ಯ ಸೌಲಭ್ಯಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮೇಲ್ದರ್ಜೆಗೇರಿಸಲು ಈ ಅನುದಾನವನ್ನು ನೀಡಲಾಗುತ್ತದೆ.

ಗ್ರಾಮೀಣ ನೈರ್ಮಲ್ಯ ರಾಜ್ಯ ಪ್ರಶಸ್ತಿಯನ್ನು 2005ರ ಅಕ್ಟೋಬರ್‌ನಲ್ಲಿ ಉದ್ಘಾಟಿಸಲಾಯಿತು. ಸ್ವಚ್ಛ ಭಾರತ ಅಭಿಯಾನದ ಪೈಕಿ 10ಕೋಟಿ ರೂಪಾಯಿಯನ್ನು ನೈರ್ಮಲ್ಯ ರಾಜ್ಯ ಪ್ರಶಸ್ತಿಗಳಿಗೆ ಮೀಸಲಿಡಲಾಗಿದೆ. ತಾಲ್ಲೂಕು ಮಟ್ಟದ ನೈರ್ಮಲ್ಯ ಪ್ರಶಸ್ತಿ ಮೂರು ಹಂತಗಳಲ್ಲಿರುತ್ತದೆ. ಅತ್ಯುತ್ತಮ ಗ್ರಾಮ ಪಂಚಾಯಿತಿ (1 ಲಕ್ಷ ರೂಪಾಯಿ), ಅತ್ಯುತ್ತಮ ಶಾಲೆ (20.000 ರೂಪಾಯಿ), ಅತ್ಯುತ್ತಮ ಗ್ರಾಮ ಪಂಚಾಯಿತಿ ಅಂಗನವಾಡಿ (10,000 ರೂಪಾಯಿ), ಎಂಬುದಾಗಿ ಮೂರು ವಿಭಾಗಗಳಲ್ಲಿರುತ್ತದೆ. ಜಿಲ್ಲಾ ಮಟ್ಟದಲ್ಲಿ 'ರಜತ ನೈರ್ಮಲ್ಯ' ಪ್ರಶಸ್ತಿಯನ್ನು ಅತ್ಯುತ್ತಮ ಗ್ರಾಮ ಪಂಚಾಯತಿಗೆ ಮೊದಲ ಬಹುಮಾನ 3 ಲಕ್ಷ ರೂಪಾಯಿ, ಎರಡನೇ ಬಹುಮಾನ 2 ಲಕ್ಷ ರೂಪಾಯಿ ಹಾಗೂ ಮೂರನೇ ಬಹುಮಾನ 1 ಲಕ್ಷ ರೂಪಾಯಿಗಳಾಗಿ ಮೂರು ಬಹುಮಾನಗಳನ್ನು ನೀಡಲಾಗುತ್ತದೆ. ಹಾಗೆಯೇ ಅತ್ಯುತ್ತಮ ಶಾಲೆಗೆ 30,000 ರೂಪಾಯಿ, ಅತ್ಯುತ್ತಮ ಅಂಗನವಾಡಿ 15.000 ರೂಪಾಯಿಗಳನ್ನು ನೀಡಲಾಗುತ್ತದೆ. ವಿಭಾಗೀಯ ಮಟ್ಟದಲ್ಲಿಯೂ 'ಸ್ವರ್ಣ ನೈರ್ಮಲ್ಯ' ಪ್ರಶಸ್ತಿಯನ್ನು ಅತ್ಯುತ್ತಮ ಗ್ರಾಮ ಪಂಚಾಯಿತಿಗೆ ಪ್ರಥಮ, ದ್ವೀತಿಯ ಮತ್ತು ತೃತೀಯ ಬಹುಮಾನಗಳಾಗಿ ಕ್ರಮವಾಗಿ 5 ಲಕ್ಷ, 4 ಲಕ್ಷ, ಹಾಗೂ 3 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತದೆ. ತಾಲ್ಲೂಕು ಪಂಚಾಯಿತಿಗೆ ಅತ್ಯುತ್ತಮ ಪ್ರಶಸ್ತಿಯಾಗಿ 10 ಲಕ್ಷ ರೂಪಾಯಿಯ ಒಂದು ಬಹುಮಾನವನ್ನು ನೀಡಲಾಗುತ್ತದೆ.

ಇನ್ನು ರಾಜ್ಯ ಮಟ್ಟದ ನೈರ್ಮಲ್ಯ ರತ್ನ ಪ್ರಶಸ್ತಿಯನ್ನು ನೀಡಲಾಗುತ್ತದೆ. ಇದರಲ್ಲಿ ಅತ್ಯುತ್ತಮ ಗ್ರಾಮ ಪಂಚಾಯಿತಿಗೆ ಮೂರು ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಮೊದಲ ಬಹುಮಾನ 10 ಲಕ್ಷ ರೂಪಾಯಿಗಳು, ಎರಡನೆಯ ಬಹುಮಾನ 7 ಲಕ್ಷ ರೂಪಾಯಿಗಳಾಗಿರುತ್ತದೆ ಹಾಗೂ ಮೂರನೆಯ ಬಹುಮಾನ 5 ಲಕ್ಷ ರೂಪಾಯಿಗಳನ್ನು ಒಳಗೊಂಡಿರುತ್ತದೆ. ಅತ್ಯುತ್ತಮ ತಾಲ್ಲೂಕು ಪಂಚಾಯಿತಿಗೆ 20 ಲಕ್ಷ ರೂಪಾಯಿಯ ಒಂದು ಬಹುಮಾನ ಹಾಗೂ ಅತ್ಯುತ್ತಮ ಜಿಲ್ಲಾ ಪಂಚಾಯಿತಿಗೆ 30 ಲಕ್ಷ ರೂಪಾಯಿಯ ಒಂದು ಬಹುಮಾನವನ್ನು ನೀಡಲಾಗುತ್ತದೆ.

ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ ಅರಕಲವಾಡಿ ಗ್ರಾಮ ಪಂಚಾಯಿತಿ, ಕೊಳ್ಳೇಗಾಲ ತಾಲ್ಲೂಕಿನ ಲೊಕ್ಕನಹಳ್ಳಿ ಗ್ರಾಮ ಪಂಚಾಯಿತಿ, ಯಳಂದೂರು ತಾಲ್ಲೂಕಿನ ಯರಗಂಬಳ್ಳಿ

ಗ್ರಾಮ ಪಂಚಾಯಿತಿ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಗ್ರಾಮ ಪಂಚಾಯಿತಿ 2019 ನೇ ಸಾಲಿನ ಗಾಂಧಿ ಪುರಸ್ಕಾರಕ್ಕೆ ಭಾಜನವಾಗಿವೆ. ಈ ಪ್ರಶಸ್ತಿಯನ್ನು ರಾಜ್ಯ ಸರ್ಕಾರವು ನೀಡುತ್ತದೆ. ಚಾಮರಾಜನಗರ ಜಿಲ್ಲೆಯಲ್ಲಿ ಹಂಗಳ ಗ್ರಾಮ ಪಂಚಾಯಿತಿಯು ಸ್ವಚ್ಛ ಭಾರತ ಅಭಿಯಾನವನ್ನು ಸಮರ್ಥವಾಗಿ ಅನುಷ್ಠಾನಕ್ಕೆ ತಂದಿರುವುದಕ್ಕಾಗಿ ನಾಲ್ಕು ಬಾರಿ ಗಾಂಧೀ ಪುರಸ್ಕಾರವನ್ನು ಪಡೆದಿದೆ. ಗಾಂಧಿ ಪುರಸ್ಕಾರಕ್ಕೆ ಪ್ರಮುಖವಾಗಿ ನಾಗರೀಕ ಸೌಲಭ್ಯಗಳಾದ ಶೌಚಾಲಯಗಳು, ಅಂದರೆ ಸಮುದಾಯ ಶೌಚಾಲಯಗಳು ಮತ್ತು ವೈಯಕ್ತಿಕ ಶೌಚಾಲಯಗಳು, ಅಂಗನವಾಡಿ ಶೌಚಾಲಯಗಳು ಶಾಲೆಗಳ ಶೌಚಾಲಯಗಳು ಸರ್ಕಾರಿ ಕಚೇರಿಗಳ ಶೌಚಾಲಯಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಉತ್ತಮವಾದ ಸಾಧನೆಯನ್ನು ಸಾಧಿಸಿರಬೇಕು, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಬೀದಿದೀಪಗಳ ವ್ಯವಸ್ಥೆ, ಬೀದಿಗಳು ರಸ್ತೆಗಳಾಗಿರಬೇಕು. ಅಂಚೆ ಸೌಲಭ್ಯ, ಗ್ರಂಥಾಲಯಗಳು, ಆಸ್ಪತ್ರೆಗಳು, ನ್ಯಾಯಬೆಲೆ ಅಂಗಡಿಗಳು ಇವೇ ಮೊದಲಾದವುಗಳನ್ನು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉತ್ತಮವಾಗಿ ನಿರ್ವಹಣೆ ಮಾಡಿರಬೇಕು.

**ಉಪಸಂಹಾರ**

ಒಟ್ಟಾರೆ ಸ್ವಚ್ಛತೆಯಲ್ಲಿ ಗ್ರಾಮ ಪಂಚಾಯಿತಿಗೆ ಬಿಡುಗಡೆಯಾದ ಅನುದಾನಗಳ ಸದ್ಬಳಕೆ, ಸಭೆಗಳ ಪಾರದರ್ಶಕತೆ, ಆನ್‌ಲೈನ್‌ಗೆ ಮಾಹಿತಿಯನ್ನು ಅಪ್ಲೋಡ್ ಮಾಡುವುದು ಸೇರಿದಂತೆ ಎಲ್ಲಾ ಅಚ್ಚುಕಟ್ಟುತನದ ಆಧಾರದ ಮೇಲೆ ಪುರಸ್ಕಾರವನ್ನು ನೀಡಲಾಗುತ್ತದೆ. ಆದರೆ ಚಾಮರಾಜನಗರ ಜಿಲ್ಲೆಯಲ್ಲಿ ಗಾಂಧೀ ಪುರಸ್ಕಾರಕ್ಕೆ ಪಾತ್ರವಾಗಿರುವ ಗ್ರಾಮ ಪಂಚಾಯಿತಿಗಳಲ್ಲಿ ನಾಗರಿಕ ಸೌಲಭ್ಯಗಳು ಸಾಕಷ್ಟು ಇದ್ದರೂ ಪರಿಪೂರ್ಣವಾಗಿ ಬಳಕೆಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೂ ಹೆಚ್ಚು ವೈಯಕ್ತಿಕ ಶೌಚಾಲಯಗಳನ್ನು ಹೊಂದಿವೆ ಎಂಬ ಕಾರಣಕ್ಕೆ ಆಯಾ ಸಾಲಿನಲ್ಲಿ ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳನ್ವಯ ಹೆಚ್ಚು ಅಂಕಗಳನ್ನು ಪಡೆಯುವ ಗ್ರಾಮ ಪಂಚಾಯಿತಿಗಳಿಗೆ ಈ ಪುರಸ್ಕಾರವನ್ನು ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ನಾಲ್ಕು ಗ್ರಾಮ ಪಂಚಾಯಿತಿಗಳು ಗಾಂಧೀ ಗ್ರಾಮ ಪುರಸ್ಕಾರವನ್ನು ಪಡೆದಿರುತ್ತವೆ. ಹಂಗಳ ಗ್ರಾಮ ಪಂಚಾಯಿತಿಗೆ ವಿದೇಶಿ ಪ್ರವಾಸಿಗರು ನೈಜೀರಿಯಾ, ಮತ್ತು ಬ್ರೆಜಿಲ್‌ನಿಂದ ಗಾಂಧಿ ಪುರಸ್ಕಾರ ಪಡೆದಿರುವ ಗ್ರಾಮ ಪಂಚಾಯಿತಿಯ ಕಾರ್ಯವೈಖರಿಗಳನ್ನು ವೀಕ್ಷಿಸಲು ಭೇಟಿ ನೀಡಿರುವುದು ಈ ಜಿಲ್ಲೆಯ ಪಂಚಾಯತ್ ರಾಜ್ ಆಡಳಿತದ ಯಶಸ್ವಿಗೆ ಸಾಕ್ಷಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- *ಚಾಮರಾಜನಗರ ಜಿಲ್ಲೆ ಮಾನವ ಅಭಿವೃದ್ಧಿ ವರದಿ.* (2018)
- *Guidelines for swachh Bharat Mission (Gramin).* (2017). Ministry of drinking water and sanitization.
- Swachh Bharat Abhiyan Clean India Abhiyan. (2016). *International Research Journal of Management, IT &Amp; Social Sciences*, *3*(3).
- Sindhu, S., Nehra, V., & Luthra, S. (2016). Identification and analysis of barriers in implementation of solar energy in Indian rural sector using integrated ISM and fuzzy MICMAC approach. *Renewable and Sustainable Energy Reviews*, *62*, 70–88.